ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 675

ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 22.02.2022

ಉತ್ತರಿಸುವವರು : ಗಣಿ ಮತ್ತು ಭೂವಿಜ್ಞಾನ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಎಲ್ಲೆಲ್ಲಿ ಚಿನ್ನ ಹಾಗೂ ಬೆಳ್ಳಿಯ ಗಣಿಗಾರಿಕೆ ನಡೆಯುತ್ತಿವೆ;	ರಾಜ್ಯದಲ್ಲಿ ಚಿನ್ನದ ಗಣಿಗಾರಿಕೆಯು ಮುಖ್ಯವಾಗಿ ರಾಯಚೂರು ಜಿಲ್ಲೆಯ ಹಟ್ಟಿಯಲ್ಲಿ, ಹಟ್ಟಿ ಘಟಕದ ಉಪಗ್ರಹ ಗಣಿಗಳಾಗಿ ದೇವದುರ್ಗ ತಾಲ್ಲೂಕಿನ ಊಟಿ ಗ್ರಾಮ ಹಾಗೂ ಸಿರವಾರ ತಾಲ್ಲೂಕಿನ ಹೀರಾಬುದ್ದಿನ್ನಿ ಗ್ರಾಮದಲ್ಲಿ ಸಣ್ಣ ಪ್ರಮಾಣದಲ್ಲಿ ಚಿನ್ನದ ಗಣಿಗಾರಿಕೆ ನಡೆಯುತ್ತದೆ. ಸದರಿ ಚಿನ್ನದ ಉತ್ಪಾದನೆಯಲ್ಲಿ ಸ್ವಲ್ಪ ಪ್ರಮಾಣದಲ್ಲಿ ಬೆಳ್ಳಿ ಖನಿಜವು ದೊರೆಯುತ್ತದೆ. ಬೆಳ್ಳಿ ಖನಿಜಕ್ಕೆ ಯಾವುದೇ ಗಣಿ ಗುತ್ತಿಗೆ ಮಂಜೂರಾಗಿರುವುದಿಲ್ಲ.
ಆ)	ಸದರಿ ಗಣಿಗಾರಿಕೆಯಿಂದ ಎಷ್ಟು ಪ್ರಮಾಣದಲ್ಲಿ ಚಿನ್ನ ಮತ್ತು ಬೆಳ್ಳಿಯ ಉತ್ಪನ್ನವಾಗುತ್ತಿವೆ;	ಹಟ್ಟಿ ಚಿನ್ನದ ಗಣಿ ಉದ್ದಿಮೆಯಲ್ಲಿ ಹಟ್ಟಿ ಘಟಕ ಹಾಗೂ ಹಟ್ಟಿ ಘಟಕದ ಉಪಗ್ರಹ ಗಣಿಗಳಿಂದ ಒಟ್ಟಾರೆಯಾಗಿ ಪ್ರತಿ ವರ್ಷ ಸರಾಸರಿ ಅಂದಾಜು 1500 ರಿಂದ 1800 ಕೆಜಿ ಗಳಷ್ಟು ಚಿನ್ನವನ್ನು ಉತ್ಪಾದನೆ ಮಾಡಲಾಗುತ್ತದೆ. ಚಿನ್ನದ ಗಣಿಗಾರಿಕೆಯ ಪ್ರಕ್ರಿಯೆ ಸಂದರ್ಭದಲ್ಲಿ ಬೆಳ್ಳಿಯು ಸಹ ಚಿನ್ನದ ಅದಿರಿನ ಜೊತೆಗೆ ಸಹ-ಧಾತುವಿನಂತೆ ದೊರೆಯುತ್ತದೆ. ಬೆಳ್ಳಿಯ ಉತ್ಪಾದನೆ ಪ್ರಮಾಣ ಪ್ರತಿ ವರ್ಷ 150 ರಿಂದ 180 ಕೆಜಿಯಷ್ಟು ಇರುತ್ತದೆ.
ಇ)	ಕೋಲಾರ ಚಿನ್ನದ ಗಣಿಯು ರಾಜ್ಯ ಸರ್ಕಾರದ ಅಸ್ತಿತ್ವದಲ್ಲಿದೆಯೇ; ಇದ್ದಲ್ಲಿ ಇದರ ಆಸ್ತಿ ಮೌಲ್ಯ ಎಷ್ಟು; ಕಾರ್ಮಿಕರಿಗೆ ನೀಡಬೇಕಾಗಿರುವ ಬಾಕಿ ಹಣ ಎಷ್ಟು?	ಕೋಲಾರದ ಚಿನ್ನದ ಗಣಿ ಅಂದರೆ ಮೆ: ಭಾರತ್ ಗೋಲ್ಡ್ ಮೈನ್ಸ್ ಲಿ., ಸಂಸ್ಥೆಯು ಕೇಂದ್ರ ಸರ್ಕಾರದ ಅಸ್ಥಿತ್ವದಲ್ಲಿರುತ್ತದೆ. ಆದಕಾರಣ ಇದರ ಮೌಲ್ಯ ಹಾಗೂ ಸದರಿ ಸಂಸ್ಥೆಯ ಕಾರ್ಮಿಕರಿಗೆ ನೀಡಬೇಕಾದ ಬಾಕಿ ಹಣದ ಬಗ್ಗೆಯ ಮಾಹಿತಿಯು ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.

ಸಂಖ್ಯೆ: ಸಿಐ 19 ಸಿಎಂಸಿ 2022

Halappa

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂವಿಜ್ಞಾನ ಮತ್ತು ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು